ಪುರಸಭೆಗಳ ಅಧಿಕಾರಾವಧಿ ವಿಸ್ತರಣೆ ಬಗ್ಗೆ

೧೯೧೯ ಶ್ರೀ ಸಿ.ಎಂ. ಉದಾಸಿ (ಹಾನಗಲ್).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಆಹಾರ ಮಂತ್ರಿ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಗರ ಹಾಗೂ ಪುರಸಭೆಗಳ ಅಧಿಕಾರಾವಧಿ ೫ ವರ್ಷಗಳಿಗೆ ವಿಸ್ತರಿಸುವುದು ಸರ್ಕಾರದವರ ಗಮನದಲ್ಲಿದೆಯೇ ?

ಆ) ಹಾಗಿದ್ದಲ್ಲಿ ಯಾವಾಗ ಆಜ್ಞೆ ಹೊರಡಿಸಲಾಗುವುದು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮಂತ್ರಿ ನಾಗರೀಕ ಸರಬರಾಜು ಮಂತ್ರಿಗಳು).—

ಅ) ಪರಿಶೀಲಿಸಲಾಗುತ್ತಿದೆ.

ಆ) 'ಅ' ಉತ್ತರದಿಂದಾಗಿ ಪ್ರಶ್ನೆ ಉದ್ಭವಿಸುವುದಿಲ್ಲ.

ಹುನಗುಂದ ಹಾಗೂ ಇಲಕಲ್ ನಗರಗಳಲ್ಲಿ ಕುಡಿಯಲಿಂವ ನೀರಿನ ಸಮಸ್ಯೆ ಬಗ್ಗೆ

೨೦೦೯ ಶ್ರೀ ಶಿವಸಂಗಪ್ಪ ಶಿದ್ದಪ್ಪ ಕಡಪಟ್ಟಿ (ಹುನಗುಂದ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರ, ನಗರಾಭಿವೃದ್ಧಿ ಹಾಗೂ ಆಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುನಗುಂದ ಹಾಗೂ ಇಲಕಲ್ಲಿಂ (ವಿಜಾಪುರ ಜಿಲ್ಲೆ) ನಗರಗಳಲ್ಲಿ ಕುಡಿಯಲಿಂವ ನೀರಿನ ಸಮಸ್ಯೆ ಜಟಿಲವಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆಂ ?

ಆ) ಈ ಹಿಂದೆ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಆಯವ್ಯಯದ ಮೇಲೆ ಉತ್ತರಿಸುವಾಗ ಹುನಗುಂದ ಇಲಕಲ್ಲು ಹಾಗೂ ೧೨ ಹಳ್ಳಿಗಳ ಪ್ರಾಂತೀಯ ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳುವುದಾಗಿ ಭರವಸೆ ಕೊಟ್ಟಿದ್ದು ಸರಕಾರದವರ ಗಮನದಲ್ಲಿ ಇದೆಯೇ ?

ಇ) ಈಗ ಆದರ ಕಾರ್ಯಕ್ರಮ ಯಾವ ಹಂತದಲ್ಲಿ ಇರುವುದು ಹಾಗೂ ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ನಗರಾಭಿವೃದ್ಧಿ ಹಾಗೂ ಆಹಾರ ಸಚಿವರು).—

ಅ) ಬಂದಿದೆ.

ಆ) ಇದೆ.

ಇ) ಈ ಯೋಜನೆಯನ್ನು ಜಪಾನ್ ಸರ್ಕಾರದ ಸಹಾಯದೊಂದಿಗೆ ತೆಗೆದುಕೊಳ್ಳಲು ಮತ್ತೆ ಪರಿಶೀಲಿಸಲಾಗುತ್ತಿದೆ. ಪೂರ್ವಭಾವಿ ಅಂದಾಜಿನ ಪ್ರಕಾರ ಈ ಯೋಜನೆಯ ಅಂದಾಜು ೫೦೦.೦೦ ಲಕ್ಷ ರೂ.ಗಳಾಗ ಬಹುದೆಂದು ನಿರೀಕ್ಷಿಸಲಾಗಿದೆ.

೧೦,೦೦೦ ಕ್ಕಿಂತ ಹೆಚ್ಚಿಗೆ ಜನಸಂಖ್ಯೆ ಇರುವ ಪುರಸಭೆಗಳನ್ನು ಮಂಡಲ ಪಂಚಾಯಿತಿಯಾಗಿ ಪರಿವರ್ತಿಸುವ ಬಗ್ಗೆ

೨೧೦೮. ಶ್ರೀ ಶಿವಸಂಗಪ್ಪ ಶಿದ್ದಪ್ಪ (ಹುನಗುಂದ).— ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೭೧ರ ಜನಗಣತಿ ಪ್ರಕಾರ ರಾಜ್ಯದಲ್ಲಿ ೧೦,೦೦೦ ಕ್ಕಿಂತ ಹೆಚ್ಚಿಗೆ ಜನಸಂಖ್ಯೆ ಇರುವ ಪುರ ಸಭೆಗಳನ್ನು ಮಂಡಲ ಪಂಚಾಯತಿ ಅಂತ ಮಾಡಿದಿರುವುದು ನಿಜವೇ ?